## ಕ್ಲೇ ಶ ನಾ ಶ ಕ ಕೃ ಷ್ಣ ಮ ಂ ತ್ರ

ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।
ಪ್ರಣತಕ್ಲೇಶನಾಶಾಯ ಗೋವಿಂದಾಯ ನಮೋ ನಮಃ ॥

ವಸುದೇವನ ಮಗನಾಗಿ ಅವತರಿಸಿದವ, ದೋಷ ಪರಿಹಾರಕ, ಸರ್ವೋತ್ತಮ ದೇವತೆ, ಶರಣಾಗತರ ದುಃಖವನ್ನು ಪರಿಹರಿಸುವವ, ವೇದಪ್ರತಿಪಾದ್ಯ ಕೃಷ್ಣನಿಗೆ ನಮನಗಳು.

**ರಾ ಗ – ವ ರಾ ಳಿ : ತಾ ಳ – ಆ ದಿ ತಾ ಳ**

**ಬಾರೋ ನಮ್ಮ ಮನೆಗೆ ಗೋಪಾಲಕೃಷ್ಣ ।ಪ।**
**ಗೊಲ್ಲ ಬಾಲಕರನು ನಿಲ್ಲಿಸಿ ಪೆಗಲೇರಿ ಗುಲ್ಲು**
**ಮಾಡದೆ ಮೊಸರೆಲ್ಲ ಸವಿದ ಕೃಷ್ಣ ।೧।**
**ಕಸ್ತೂರಿ ತಿಲಕವ ಶಿಸ್ತಾಗಿ ಪಣೆಯೊಳಿಟ್ಟು**
**ಮಸ್ತಕದಲಿ ಪರವಸ್ತು ತೋರಿದ ಕೃಷ್ಣ।೨।**
**ಮುಜ್ಜಗವನೆಲ್ಲ ಬೊಜ್ಜೆಯೊಳಗಿಟ್ಟು**
**ಗೆಜ್ಜೆಯ ಕಟ್ಟಿ ತಪ್ಪೆಜ್ಜೆಯನಿಕ್ಕುತ ।೩।**
**ನಾರೇರು ಬಿಚ್ಚಿಟ್ಟ ಸೀರೆಗಳನೆ ಪೊಯ್ದು**
**ಮ್ಯಾರೆ ಇಲ್ಲದೆ ಕರತೋರೆಂದ ಶ್ರೀಕೃಷ್ಣ।೪।**
**ಅಂಗನೆಯರ ವ್ರತಭಂಗವ ಮಾಡಿದ**
**ರಂಗವಿಟ್ಠಲ ಭವಭಂಗವ ಪರಿಹರಿಸೊ ।೫।**

**ರಾ ಗ – ಕಾ ನ ಡ : ತಾ ಳ – ಆ ದಿ ತಾ ಳ**

**ಬಾರೊ ಮುರಾರಿ ಬಾಲಕ ಶೌರಿ ।ಪ।**
**ಸಾರ ವಿಚಾರಿ ಸಂತೋಷಕಾರಿ ।ಅ ಪ।**
**ಆಟ ಸಾಕೇಳೊ ಮೈಯೆಲ್ಲ ಧೂಳೊ**
**ಊಟ ಮಾಡೇಳೊ ಕೃಷ್ಣ ಕೃಪಾಳೊ ।೧।**
**ಅರುಣಾಬ್ಜಚರಣ ಮಂಜುಳಾಭರಣ**
**ಪರಮ ವಿತರಣ ಪನ್ನಂಗಶಯನ ।೨।**
**ಮನೆಗೆದ್ದು ಬಾರೊ ಕೊನೆಗೈಯ್ಯತೋರೊ**

**ಚಿನುಮಯಬಾರೊ  ನಗೆಮುಖತೋರೊ                    । ೩ ।**
**ವೆಂಕಟರಮಣ  ಸಂಕಟ  ಹರಣ**
**ಕಿಂಕರಾಮರಗಣ  ವಂದಿತಚರಣ                    । ೪ ।**

**ಅರವಿಂದನಯನ  ಶರದೇಂದುವದನ**
**ವರ  ಯದುಸದನ  ಸಿರಿ  ಹಯವದನ                    । ೫ ।**

**ರಾ ಗ – ಪೀ ಲು  :  ತಾ ಳ – ಆ ದಿ ತಾ ಳ**

ರಂಗ  ಬಾರೊ  ಪಾಂಡುರಂಗ  ಬಾರೊ
ಶ್ರೀರಂಗ  ಬಾರೊ  ನರಸಿಂಗ  ಬಾರೊ। ಪ ।
ಕಂದ  ಬಾರೊ  ಎನ್ನ  ತಂದೆ  ಬಾರೊ
ಇಂದಿರಾರಮಣ  ಮುಕುಂದ  ಬಾರೊ    । ೧ ।
ಅಪ್ಪ  ಬಾರೊ  ತಿಮ್ಮಪ್ಪ  ಬಾರೊ
ಕಂದರ್ಪನಯ್ಯನೆ  ಕಂಚಿವರದ  ಬಾರೊ   । ೨ ।
ಅಣ್ಣಬಾರೊ ಎನ್ನ ಚಿಣ್ಣ ಬಾರೊ
ಪುಣ್ಯಮೂರ್ತಿ ಮಹಿಷಪುರಿ ಚೆನ್ನಬಾರೊ    ।೩।
ವಿಷ್ಣುಬಾರೊ  ಉಡುಪಿಕೃಷ್ಣ  ಬಾರೊ
ಎನ್ನಿಷ್ಟ ಮೂರ್ತಿ ಪುರಂದರವಿಟ್ಠಲ ಬಾರೊ। ೪ ।

**ರಾ ಗ – ಧ ನ್ಯಾ ಸಿ  :  ತಾ ಳ – ಆ ದಿ ತಾ ಳ**

ಪೋಪು  ಹೋಗೋಣ  ಬಾರೊ  ರಂಗ
ಪೋಪು  ಹೋಗೋಣ  ಬಾರೊ। ಪ ।
ಜಾಹ್ನವೀಯ  ತೀರವಂತೆ  ಜನಕರಾಯನ  ಕುವರಿಯಂತೆ
ಜಾನಕಿಯ  ವಿವಾಹವಂತೆ  ಜಾಣ  ನೀ  ಬರಬೇಕಂತೆ          । ೧ ।
ಕುಂಡಿನೀಯ  ನಗರವಂತೆ  ಭೀಷ್ಮಕನ  ಕುವರಿಯಂತೆ
ಶಿಶುಪಾಲನ  ಒಲ್ಲಳಂತೆ  ನಿನಗೆ  ವಾಲೆ  ಬರೆದಳಂತೆ          । ೨ ।

ಪಾಂಡವರು ಕೌರವರಿಗೆ ಲೆತ್ತವಾಡಿ ಸೋತರಂತೆ
ರಾಜ್ಯವನ್ನು ಬಿಡಬೇಕಂತೆ ರಂಗವಿಟ್ಠಲ ಬರಬೇಕಂತೆ ।೩।

**ರಾಗ – ಮಾಂಡ್ : ತಾಳ – ಏಕತಾಳ**

ಬಂದ ಕೃಷ್ಣ ಛಂದದಿಂದ ಬಂದ ನೋಡೆ ।
ಗೋಪವೃಂದದಿಂದಾ ನಂದಿಸುತ ಬಂದ ನೋಡೆ। ಪ ।
ಗೋವಮೇವ ನೀವ ದೇವ ಬಂದ ನೋಡೆ ।
ದೇವತಾ ವಾದ್ಯಗಳಿಂದ ಬಂದ ನೋಡೆ ।೧।
ಪಾಪ ಪ್ರೋಪ ಗೋಪ ರೂಪ ಬಂದ ನೋಡೆ
ತಾಪ ಲೋಪ ಲೇಪ ಲೋಪಾ ಬಂದ ನೋಡೆ। ೨ ।
ಭಾಸುರ ಸುಖ ಸೂಸುತ ಬಂದ ನೋಡೆ
ವಾಸುದೇವವಿಟ್ಠಲ ತಾ ಬಂದ ನೋಡೆ ।೩।

**ರಾಗ – ಭೀಂಪಲಾಸ್ : ತಾಳ – ತ್ರಿಪುಟತಾಳ**

ಕುಣಿದಾಡೊ ರಂಗ ನಲಿದಾಡೊ । ಪ ।
ಕುಣಿದಾಡೊ ಕುಂದಣದ ಸರಳೆ ನಲಿದಾಡೊ ಮಾಣಿಕದ ಹರಳೆ । ಅ ಪ ।
ಪತಿಶಾಪದಿ ಶಿಲೆಯಾದ ಗೌತಮ ಸತಿಯ ಮೆಟ್ಟಿ ಹೆಣ್ಣ ಮಾಡಿ
ಅತಿದಿವ್ಯ ಶ್ರೀಚರಣಾರವಿಂದ ಗತಿಯಿಂದಲಿ ಧಿಂಧಿಮಿಕೆನ್ನುತ ।೧।
ಗಕ್ಕಸದಿ ಶಕಟಾಸುರನ ಸೊಕ್ಕ ಮುರಿದು ಬಂಡಿಯನೊದೆದು
ಚೊಕ್ಕ ಶ್ರೀಚರಣಾರವಿಂದ ಧಿಕ್ಕಿಟ ಧಿಮಿಕಿಟ ಝುಂಕಿಟವೆನ್ನುತ ।೨।
ಬಲಿಯ ಮೆಟ್ಟಿ ಕಾಳಿಂಗನ । ಹೆಡೆಯ ತುಳಿದು ನಾಟ್ಯವನಾಡಿ
ಚೆಲುವ ಶ್ರೀಹಯವದನ ನಿಮ್ಮ ಘಲಿಘಲಿ ಗೆಜ್ಜೆ ಘಿಲುಘಿಲುಕೆನ್ನುತ ।೩।

**ರಾಗ – ಸಿಂಧುಭೈರವಿ : ತಾಳ – ರೂಪಕತಾಳ**

ಕುಣಿ ಕುಣಿಯೊ ಕೃಷ್ಣ ಕುಣಿಕುಣಿಯೊ । ಪ ।
ಫಣಿ ಫಣದಲಿ ಠಣ ಠಣ ಕುಣಿದಂತೆ । ಅ ಪ ।
ಅಂದುಗೆಯಲುಗಲು ಮಾಗಾಯಿವುಲಿಯಲು

ಚೆಂದದಿ ಕಿರುಗೆಜ್ಜೆ ಝಣಕು ಕಿಂಝಣಕೆನೆ ।೧।
ಧಂಧಣ ಧಣಕೆಂದು ಬೊಮ್ಮ ಮದ್ದಳೆ ಹೊಯ್ಯೆ
ತಂದನ್ ತಾನಾ ಎಂದು ಹನುಮಂತ ಪಾಡಲು ।೨।
ಧಿಂ ಧಿಂ ಧಿಮಿಕೆಂದು ನಂದಿವಾಹನ ತಾಳ
ಚೆಂದದಿ ಬಾರಿಸೆ ಇಂದಿರೆಯರಸನೆ ।೩।
ಅಂಬರದಲಿ ದಿವ್ಯಾಂಬರ ಧರಿಸಿ
ಚಿಂಬಿ ಭೇರಿಗಳೆಲ್ಲ ಸಂಭ್ರಮದಲಿ ನೋಡೆ ।೪।
ವರದಗೋಪಾಲವಿಟ್ಠಲಯೆನ್ನ ಶಿರದಲ್ಲಿ
ಪರಮ ಸುಂದರ ದಿವ್ಯ ಚರಣ ದ್ವಯಗಳಿಂದ ।೫।

**ರಾ ಗ – ಆ ರ ಭಿ : ತಾ ಳ – ಆ ದಿ ತಾ ಳ**

ಆಡಿದನೊ ರಂಗ ಅದ್ಭುತದಿಂದಲಿ ಕಾಳಿಂಗನ ಫಣೆಯಲಿ ।ಪ।

ಅಂಬುರುಹೋದ್ಭವ ಅಖಿಳ ಸುರರು ಕೂಡಿ
ಅಂಬರದಲಿ ನಿಂತು ಅವರ ಸ್ತುತಿಸೆ ।ಅ.ಪ।

ರಂಭೆ ಊರ್ವಶಿ ರಮಣಿಯರೆಲ್ಲರು ಚೆಂದದಿ
ಭರತನಾಟ್ಯವ ನಟಿಸೆ ಝುಂ ತಕ ತಕಧಿಮಿ ತಧಿಗಿಣ
ತೋಂ ಎಂದು ಝುಂಪೆ ತಾಳದಿ ತುಂಬುರನೊಪ್ಪಿಸೆ। ೧।

ಧಾಮಪಪಾದಸರೀ ಎಂದು ಧ್ವನಿಯಿಂದ ನಾರದ
ತುಂಬುರ ಗಾನವ ಮಾಡಲು ನಂದಿಯು ಮದ್ದಲೆ
ಚಂದದಿ ಹಾಕಲುಫಣವ ಮೆಟ್ಟಿ ಬಾಲವ ಕೈಯಲಿ ಪಿಡಿದು
ಫಳಫಳಿಸುತ್ತೆ ನಾಟ್ಯವನಾಡೆ ಚಂದ್ರಮಂಡಲದಂತೆ
ಹೊಳೆಯುವ ಮುಖದೊಳು ಚಲಿಸುವ
ನೀಲಕೇಶಗಳಾಡೆ ಕಾಲಲಂದುಗೆ ಗೆಜ್ಜೆ
ಘಲುಘಲು ಘಲಿರೆನುತ ಉಡಿಗೆಜ್ಜೆ ಘಂಟೆಗಳಾಡೆ

ದುಷ್ಟ ಕಾಳಿಂಗನ ಮೆಟ್ಟಿ ಭರದಿಂದ ಪುಟ್ಟಪಾದವ
ಇಟ್ಟು ಶ್ರೀಕೃಷ್ಣನು ಮೆಟ್ಟಿದನು ತಕಧಿಮಿ ತಧಿಕೆನುತ ।೧ ।

ಸುರರು ಪುಷ್ಪದ ವೃಷ್ಟಿಯ ಕರೆಯಲು ಸುದತಿಯರೆಲ್ಲರು ಪಾಡಲು
ನಾಗಕನ್ನಿಕೆಯರು ನಾಥನ ಬೇಡಲು ನಾನಾ ವಿಧದಿ ಸ್ತುತಿ ಮಾಡಲು
ರಕ್ಕಸರೆಲ್ಲರು ಕಕ್ಕಸವನೆ ಕಂಡು ದಿಕ್ಕು ದಿಕ್ಕುಗಳಿಗೆ ಓಡಲು
ಚಿಕ್ಕವನಿವನಲ್ಲ ಪುರಂದರವಿಟ್ಠಲ ವೆಂಕಟರಮಣನೆ ಬೇಗ ಯಶೋದೆ
ಬಿಂಕದೊಳೆತ್ತಿ ಮುದ್ದಾಡೆ ಕೃಷ್ಣನ । ೨ ।

**ರಾ ಗ – ಮ ಧ್ಯ ಮಾ ವ ತಿ : ತಾ ಳ – ಏ ಕ ತಾ ಳ**

ಇಕ್ಕೋ ನೋಡೆ ರಂಗನಾಥನ ಪುಟ್ಟ ಪಾದವ । ಪ ।
ಸಿಕ್ಕಿತೆ ಶ್ರೀಲಕ್ಷ್ಮೀಪತಿಯ ದಿವ್ಯಪಾದವ । ಅ ಪ ।
ಶಂಖ ಚಕ್ರ ಗದಾಪದ್ಮ ಅಂಕಿತ ಪಾದವ
ಅಂಕುಶ ಕುಲಿಶ ಧ್ವಜರೇಖಾ ಅಂಕಿತ ಪಾದವ ।
ಪಂಕಜಾಸನನ ಹೃದಯದಲ್ಲಿ ನಲಿಯುವ ಪಾದವ
ಸಂಕಟಹರಣ ವೆಂಕಟೇಶನ ದಿವ್ಯ ಪಾದವ । ೧ ।
ಲಲನೆ ಲಕ್ಷ್ಮಿಯಂಕದಲ್ಲಿ ನಲಿಯುವ ಪಾದವ
ಜಲಜಾಸನನ ಅಭೀಷ್ಟವೆಲ್ಲ ಸಲಿಸುವ ಪಾದವ
ಮಲ್ಲರ ಗೆಲಿದು ಕಂಸಾಸುರನ ಕೊಂದ ಪಾದವ
ಬಲಿಯ ಮೆಟ್ಟಿ ಭಾಗೀರಥಿಯ ಪಡೆದ ಪಾದವ । ೨ ।
ಬಂಡೆಯ ಬಾಲೆಯ ಮಾಡಿದ ಉದ್ದಂಡ ಪಾದವ
ಬಂಡಿಲಿದ್ದ ಶಕಟಾಸುರನ ಒದ್ದ ಪಾದವ
ಅಂಡಜ ಹನುಮರ ಭುಜದೊಳೊಪ್ಪುವ ಪಾದವ
ಕಂಡೆವೆ ಶ್ರೀರಂಗವಿಟ್ಠಲನ ದಿವ್ಯಪಾದವ । ೩ ।

**ರಾ ಗ – ಅ ಠಾ ಣ : ತಾ ಳ – ಮಿ ಶ್ರ ಝ ಂ ಪೆ ತಾ ಳ**

ಎಂಥಾ ಪಾವನ ಪಾದವೊ ಕೃಷ್ಣಯ್ಯ
ಇನ್ನೆಂಥಾ ಚೆಲುವ ಪಾದವೊ । ಪ ।
ಎಂಥಾ ಪಾವನ ಪಾದ ಇಂತು ಜಗದಿ ಕೇಳು
ಪಂಥದೊಳಿದ್ದ ಕುರುಪತಿಯ ಉರುಳಿಸಿದ । ಅ ಪ ।
ಹಲವು ಕಾಲಗಳಿಂದಲಿ ಮಾರ್ಗದಿ ಶಿಲೆ ಶಾಪ ಪಡೆದಿರಲು
ಒಲಿದು ರಜದಿ ಪಾವನಗೈದು ಕರುಣದಿ ಶಿಲೆಯ
ಬಾಲೆಯ ಮಾಡಿ ಸಲಹಿದ ಹರಿಯ । ೧ ।
ಬಲಿಯ ದಾನವ ಬೇಡಿ ತ್ರೈಲೋಕ್ಯವನಳೆದು
ಏಕಾಂಘ್ರಿಯಲಿಡಿ ಬೆಳೆದು ಭೇದಿಸಲಾಗ ನಳಿನಜಾಂಡವ
ಸೋಕೆ ಚೆಲುವ ಗಂಗೆಯ ಪೆತ್ತ ಜಲಜಾಸನಾರ್ಚಿತ । ೨ ।
ಚೆಂಡು ತರುವ ನೆವದಿ ಕಾಳಿಂಗನುದ್ದಂಡ ಮಡುವ ಧುಮುಕಿ
ಚೆಂಡ ಕಾಳಿಂಗನ ಮಂಡೆಯೊಳು ಪಾದ
ಪುಂಡರೀಕವನಿಟ್ಟು ತಾಂಡವನಾಡಿದ । ೩ ।
ಸಂತತ ಸೌಖ್ಯವೀವ ಕಾವೇರಿಯಅಂತರಂಗದಿ ನೆಲೆಸಿ
ಸಂತೋಷದಿಂದ ಅನಂತನ ಮ್ಯಾಲೆ ನಿಶ್ಚಿಂತೆಯೊಳು
ಲಕುಮಿ ಭೂಕಾಂತೇರ ಸೇವಿಪ । ೪ ।
ಒಲಿದು ಗಯಾಸುರನ ಶಿರದೊಳಿಟ್ಟುಹಲವು ಭಕ್ತರ ಪೊರೆದೆ
ನೆಲೆಸಿ ಉಡುಪಿಲಿ ಎನ್ನ ಹೃದಯಕಮಲದಲ್ಲಿ
ತೊಲಗದೆ ಇರುತಿಪ್ಪ ಸುಲಭ ಹಯವದನ । ೫ ।

**ರಾ ಗ – ನಾ ದ ನಾ ಮ ಕ್ರಿ ಯೆ : ತಾ ಳ – ಆ ದಿ ತಾ ಳ**

ಇವನ ಹಿಡಿದುಕೊಂಡು ಹೋಗೆಲೊ ಜೋಗಿ । ಪ ।
ಇವ ನಮ್ಮ ಮಾತ ಕೇಳದೆ ಪುಂಡನಾದ । ಅ ಪ ।
ಆಡುತಾಡುತ ಪೋಗಿ ನೀರೊಳು ಮುಳುಗಿದ ಬೇಡವೆಂದರೆ ಬೆಟ್ಟ
ಬೆನ್ನಲಿ ಹೊತ್ತ ದಾಡೆಯ ಮೇಲೆ ತಾ ಧಾರಿಣಿ ನೆಗೆಹಿದ
ಹಿಡಿಯ ಹೋದರೆ ಬಾಯ ತೆರೆದು ಅಂಜಿಸಿದ । ೧ ।

ಹುಲ್ಲಲ್ಲಿ ವಿಪ್ರನ ಕಣ್ಣು ತಿವಿದ ಬುದ್ಧಿ ಇಲ್ಲವೆಂದರೆ
ಕೈಲಿ ಕೊಡಲಿಯ ಪಿಡಿದ ಬಿಲ್ಲು ಹಿಡಿದು ರಕ್ಕಸರನು ಸವರಿದ
ಬಲ್ಲಿದ ಮಾವನ ಶಿರವನು ತರಿದ ।೨।
ಬತ್ತಲೆ ಕುದುರೆಯ ಹತ್ತಬೇಡೆಂದರೆ ಹತ್ತಿದನೊ
ಇವ ಛಲದಿಂದ ಭಕ್ತವತ್ಸಲ ಸಿರಿ ಪುರಂದರವಿಟ್ಠಲನ
ಎತ್ತಲಾದರು ಕೊಂಡು ಹೋಗೆಲೊ ಜೋಗಿ ।೩।

**ರಾಗ – ಭೈರವಿ : ತಾಳ – ಅಟತಾಳ**

ಇಂದು ಎನಗೆ ಗೋವಿಂದ ನಿನ್ನಯ
ಪಾದಾರವಿಂದವ ತೋರೊ ಮುಕುಂದನೆ ।ಪ।
ಸುಂದರವದನನೆ ನಂದಗೋಪನ ಕಂದ
ಮಂದರೋದ್ಧಾರ ಆನಂದ ಇಂದಿರಾರಮಣ। ಅ ಪ ।
ನೊಂದೆನಯ್ಯ ಭವಬಂಧನದೊಳು ಸಿಲುಕಿ ಮುಂದೆ
ದಾರಿಗಾಣದೆ ಕುಂದಿದೆ ಜಗದೊಳು ।
ಕಂದನೆಂದು ಎನ್ನ ಕುಂದುಗಳೆಣಿಸದೆ ತಂದೆ
ಕಾಯೊ ಕೃಷ್ಣ ಕಂದರ್ಪಜನಕನೆ ।೧।
ಮೂಢತನದಿ ಬಲು ಹೇಡಿ ಜೀವನನಾಗಿ
ದೃಢಭಕುತಿಯನು ಮಾಡಲಿಲ್ಲವೊ ಹರಿಯೆ ।
ನೋಡಲಿಲ್ಲವೊ ನಿನ್ನ ಪಾಡಲಿಲ್ಲವೊ ಮಹಿಮೆ
ಗಾಡಿಕಾರ ಕೃಷ್ಣ ಬೇಡಿಕೊಂಬೆನೊ ನಿನ್ನ ।೨।
ಧಾರುಣಿಯೊಳು ಭಾರಜೀವನನಾಗಿ ಮೇರೆತಪ್ಪಿ
ನಡೆದೆ ಸೇರಿದೆ ಕುಜನರ ।
ಆರೂ ಕಾಯುವರಿಲ್ಲ ಸೇರಿದೆ ನಿನಗಯ್ಯ
ಧೀರವೇಣುಗೋಪಾಲ ಪಾರುಗಾಣಿಸೊ ಹರಿಯೆ ।೩।

**ರಾ ಗ – ಶ ಂ ಕ ರಾ ಭ ರ ಣ : ತಾ ಳ – ಏ ಕ ತಾ ಳ**

ಕಂಡೆ ಕಂಡೆ ಕೃಷ್ಣ ನಿನ್ನಯ ದಿವ್ಯ ಮಂಗಳ ಮೂರ್ತಿಯ
ಕಂಡು ಬದುಕಿದೆ ಇಂದು ನಾನು ಕರುಣಿಸೊ ಎನ್ನೊಡೆಯನೆ ।ಪ।
ಉಟ್ಟ ದಟ್ಟಿಯು ಪಿಡಿದ ವಂಕಿಯು ತೊಟ್ಟ ಕೌಸ್ತುಭ ಭೂಷಣ
ಮೆಟ್ಟಿದ ನವರತ್ನದ್ಹಾವಿಗೆ ಇಟ್ಟ ಕಸ್ತುರಿ ತಿಲಕವ ।೧।
ಮಂದಹಾಸವು ದಂತಪಂಙ್ತಿಯು ಉಂದದ ಕಡೆಗಣ್ಣ ನೋಟವು
ಅಂದವಾದ ಕುರುಳುಗೂದಲು ಮುದ್ದು ಸುರಿವೊ ಮುಖವನಾ ।೨।
ಮೊಲ್ಲೆ ಮಲ್ಲಿಗೆ ದಂಡೆ ಕೊರಳಲಿ ಚೆಲ್ವ ಕಂಕಣ ಕೈಯಲಿ
ಗೊಲ್ಲ ಸತಿಯರ ಕುಚಗಳಲ್ಲಿ ಅಲ್ಲೆಡೆ ಮಾಡಿ ನಗುವನ ।೩।
ಸುರರು ಪುಷ್ಪದ ವೃಷ್ಟಿ ಕರೆಯಲು ಅಸುರರೆಲ್ಲರು ಓಡಲು
ಕ್ರೂರ ಕಾಳಿಯ ಫಣಗಳಲ್ಲಿ ಧೀರ ಕುಣಿಕುಣಿದಾಡಿದ ।೪।
ಇನ್ನು ಎನ್ನ ಬಂಧ ತೀರಿತು ಇನ್ನು ಕ್ಲೇಶವು ಹೋಯಿತು
ಅನ್ಯ ದೈವವ ಭಜಿಸಲ್ಯಾತಕೆ ಮನ್ನಿಸೊ ಹಯವದನನೆ ।೫।

**ರಾ ಗ – ಶ ಂ ಕ ರಾ ಭ ರ ಣ : ತಾ ಳ – ಅ ಟ ತಾ ಳ**

ಕೃಷ್ಣರಾಯನೆ ನಿನ್ನಯ ಕೃತ್ಯಂಗಳನೆಲ್ಲ
ಸೃಷ್ಟಿಯೊಳಗೆ ನಾನು ಬೀರಲ್ಯಾ ।ಪ।
ಶಿಷ್ಟರೊಳಗೆ ಇಟ್ಟು ಚಿರಕಾಲದಲೆನ್ನ
ಕಷ್ಟಬಿಡಿಸದೆ ಸುಮ್ಮನಿದ್ದೆಯ ।ಅ ಪ।
ಜನನ ಮರಣ ಶೂನ್ಯನೆನಿಸಿಕೊಂಡು
ಗೋಪಿ ತನಯನಾಗಿದ್ದುದು ಹೇಳಲ್ಯ
ಸನಕಾದಿಸೇವ್ಯ ಪೂಜ್ಯನೆ ತುರುಗಳ
ಹಿಂಡು ವನದಲ್ಲಿ ಕಾಯ್ದದ್ದು ಹೇಳಲ್ಯ ।೧।
ಧನುಜಭಂಜನನಾದ ಘನಮಹಿಮನೆ
ಮಾಗಧನಿಗಂಜಿ ಓಡಿದ್ದು ಹೇಳಲ್ಯ
ಎಣೆಯಿಲ್ಲದ ಶೂರ ರಣದೊಳು
ಪಾರ್ಥನಿಗೆ ಅಣುಗನಾಗಿದ್ದದ್ದು ಹೇಳಲ್ಯ ।೨।

ಸತತ ತೃಪ್ತನಾಗಿ ಕ್ಷಿತಿಯೊಳು ಬೆಣ್ಣೆಯ
ಮಿತವಾಗಿ ಕದ್ದದ್ದು ಹೇಳಲ್ಯ
ಕೃತಿದೇವಿರಮಣನೆ ಅತಿ ಪ್ರೀತಿಯಲಿ
ಗೋಪಸತಿಯರ ಕೂಡಿದ್ದು ಹೇಳಲ್ಯ ।೩।
ಶ್ರುತಿತತಿಗಳಿಗಭೇದ್ಯ ಪ್ರತಿಯಿಲ್ಲದ
ದೇವಸತಿಗ್ಳೊಶನಾದದ್ದು ಹೇಳಲ್ಯ
ಶತಕ್ರತು ವಿಧಿವಂದ್ಯ ಸುತರಾಪೇಕ್ಷಿಸಿ
ಭೂತಪತಿಯನ್ನು ಬೇಡಿದ್ದು ಹೇಳಲ್ಯ ।೪।
ಭೂತಳದೊಳು ದೇವತೆಗಳೊಡನೆ
ಇಂಥರೀತಿಲಿ ಚರಿಸಿದ್ದು ಹೇಳಲ್ಯ
ಭೀತಿರಹಿತ ಜಗನ್ನಾಥವಿಟ್ಠಲನೆ
ಅದ್ಭುತ ಮಹಿಮನೆಂದು ಹೇಳಲ್ಯ ।೫।

**ರಾಗ – ಖರಹರಪ್ರಿಯ : ತಾಳ – ಆದಿತಾಳ**

ಕಂಡೆ ಫಂಡರಿರಾಯನ ತನ್ನನು ಕೊಂಡಾಡುವರ ಪ್ರಿಯನ ವಿಟ್ಠಲನ ।ಪ।
ಸಮಚರಣಾಂಬುಜನ ನಿಗಮಾಗಮತತಿಗೆ ಗೋಚರನ ವಿಟ್ಠಲನ
ಅಮಿತಪರಾಕ್ರಮನ ರುಕ್ಮಿಣಿರಮಣ ಸುಲಕ್ಷಣನ ವಿಟ್ಠಲನ ।೧।
ಕಾಮಿತಾರ್ಥಪ್ರದನ ಸಿರಿತುಲಸೀಧಾಮ ವಿಭೂಷಣನ
ಸಾಮಜಪತಿಪಾಲನ ತ್ರೈಜಗತ್ಸ್ವಾಮಿ ಚಿತ್ಸುಖಮಯನ ವಿಟ್ಠಲನ ।೨।
ಶ್ವೇತವಾಹನ ಸಖನ ಸತಿಗೆ ಪಾರಿಜಾತವ ತಂದಿತ್ತನಾ ವಿಟ್ಠಲನ
ವೀತಶೋಕ ಭಯನ ಶ್ರೀಜಗನ್ನಾಥವಿಟ್ಠಲರೇಯನ ।೩।

**ರಾಗ – ಭೀಂಪಲಾಸ್ : ತಾಳ – ಛಾಪುತಾಳ**

ನಲಿವ ಬೆಣ್ಣೆಯನು ಮೆಲುವ ।
ಕೃಷ್ಣ ನಮಗೊಲಿವ । ಖಳರನ್ನೆ ಕೊಲುವ ।ಪ।
ನಗವ ಕರದಿಂದ ನೆಗವ । ಅದರೊಳಗೆಪೋಗುವ ।
ನರರ ಕಂಡು ನಗುವ ।೧।

ಕಡೆವ ಕೋಲನ್ನು ಪಿಡಿವ ।
ಭೂಷಣವ ತೊಡುವ । ಪಟ್ಟೆಗಳನುಡುವ । ೨ ।
ಬಡವರಭೀಷ್ಟಗಳ ಕೊಡುವ ।
ದುರಿತಗಳಜಡಿವ । ದೈತ್ಯರನು ಬಡಿವ । ೩ ।
ಶರಣ ನಾಯಕನ ಚರಣ ।
ದ್ವಯಕೆ ಪುರಹರಣ । ಮಸ್ತಕಾಭರಣ । ೪ ।
ಶರಣ ಜನರ ಹಿತಕರಣ ।
ಹಯವದನ ಸ್ಮರಣ । ಭವಕೆ ಸಂಹರಣ । ೫ ।

**ಉ ಗಾ ಭೋ ಗ : ರಾ ಗ – ಆ ರ ಭಿ**

**ನಿನ್ನನೇ ನಂಬಿದೆ ಕೃಷ್ಣ ಅನ್ಯರೊಬ್ಬರ ಕಾಣೆ**
**ಪನ್ನಂಗಶಯನ ಶ್ರೀವಕ್ಷ ಬಾರೊ**
**ಇರಳು ಹಗಲು ನಿನ್ನ ಚರಣಕ್ಕೆ ಮೊರೆಹೊಕ್ಕೆ**
**ಸರಿಯಾರು ಈರೇಳು ಭುವನದೊಳು ಹಯವದನ**

**ರಾ ಗ – ಆ ರ ಭಿ : ತಾ ಳ – ಆ ದಿ ತಾ ಳ**

ಹ್ಯಾಂಗೆ ಮಾಡಲಯ್ಯ ಕೃಷ್ಣ ಹೋಗುತಿದೆ ಆಯು । ಪ ।
ಮಂಗಳಾಂಗ ಭವಭಂಗ ಬಿಡಿಸಿ ನಿನ್ನ
ಡಿಂಗರಿಗನ ಮಾಡೊ ಅಂಗಜ ಜನಕ । ಅ ಪ ।

ಏಸು ಜನುಮದ ಸುಕೃತದ ಫಲವೊ ತಾನು ಜನಿಸಲಾಗಿ
ಭೂಸುರ ದೇಹದ ಜನುಮವು ಎನಗೆ ಸಂಭವಿಸಿದೆಯಾಗಿ
ತೋಷಶಾಸ್ತ್ರಮತ ಚಿನ್ಹಿತನಾಗದೆ ದೋಷಕೆ ಒಳಗಾಗಿ
ಲೇಸು ಸಾಧನವ ಕಾಣದೆ ದುಸ್ಸಹವಾಸದಿಂದಲಿ ದಿನದಿನ ಕಳೆದೆ । ೧ ।

ಶಶಿಮುಖಿ ಕನಕದ ಆಸೆಗೆ ಬೆರೆತು ವಸುಪತಿ ನಿನ್ನಡಿಯ
ಹಸನಾಗಿ ನಿನ್ನ ನೆನೆಯದೆ ಕೃಪೆಯ ಗಳಿಸದೆ ಕೆಟ್ಟೆನಯ್ಯ
ನಿಶಿಹಗಲು ಸ್ಥಿರವೆಂದು ತನುವನು ಪೋಷಿಸಲಾಶಿಸಿ ಜೀಯ
ಉಸುರಿದ ನೆಲವೊ ಸರ್ವಕಾಲ ನಿನ್ನೊಡೆತನೆಂಬುವ ಬಗೆಯನು ಅರಿಯದೆ। ೨ ।

ನೆರೆನಂಬಿದ ಪಾವಟಿಗಳು ಎಲ್ಲ ಸರಿದು ಪೋದುವಲ್ಲ
ಮರಳಿ ಈ ಪರಿ ಜನುಮವು ಬರುವ ಭರವಸೆಯಂತು ಇಲ್ಲ
ಪರಿಪರಿ ವಿಷಯದ ಆಸೆಯು ಎನಗೆ ಪಿರಿದು ಆಯಿತಲ್ಲ
ಹರಿಯೆ ಜಗದಿ ನೀನೊಬ್ಬನಲ್ಲದೆ ಪೊರೆವರಿನ್ನಾರು ಇಲ್ಲವಲ್ಲ । ೩ ।

ಅವನಿಯೊಳಗೆ ಪುಣ್ಯಕ್ಷೇತ್ರ ಚರಿಸುವ ಹವಣಿಕೆ ಎನಗಿಲ್ಲ
ಪವನಾತ್ಮಕ ಗುರು ಮಧ್ವಶಾಸ್ತ್ರದ ಪ್ರವಚನ ಕೇಳಲಿಲ್ಲ
ತವಕದಿಂದ ಗುರುಹಿರಿಯರ ಸೇವಿಸಿ ಅವರ ಒಲಿಸಲಿಲ್ಲ
ರವಿನಂದನ ಕೇಳಿದರುತ್ತರ ಕೊಡೆ ವಿವರ ಸರಕು ಒಂದಾದರಿಲ್ಲ । ೪ ।

ಭಾಗವತರೊಡಗೂಡಿ ಉಪವಾಸ ಜಾಗರ ಒಂದು ದಿನ ಮಾಡಲಿಲ್ಲ
ರಾಗದಿ ಶುಕಮುನಿ ಪೇಳ್ದ ಹರಿಕಥೆ ಸಂಯೋಗ ಎಂಬುದಿಲ್ಲ
ನೀಗುವಂಥ ಭವಭಯ ಭಕುತಿ ವೈರಾಗ್ಯವೆಂಬೋದಿಲ್ಲ
ಯೋಗಿವಂದ್ಯ ಗೋಪಾಲವಿಟ್ಠಲ ತಲೆಬಾಗಿ ನಿನ್ನನೇ ಬೇಡಿಕೊಂಬೆ । ೫ ।

## ಕೃಷ್ಣಾ ನೀ ಬೇಗನೇ ಬಾರೋ ।

ಬೇಗನೇ ಬಾರೋ ಮುಖವನ್ನೆ ತೋರೋ ॥
ಹುಟ್ಟಿದ್ದು ಮಧುರೆಲಿ ಬೆಳೆದಿದ್ದು ಗೋಕುಲ ।
ಜಲಕ್ರೀಡೆಯಾಡಿದ್ದು ಯಮುನೆಯ ತೀರ ।
ಕಾಶೀ ಪೀತಾಂಬರ ಕೈಯಲಿ ಕೊಳಲು ।
ಪೂಸೀದ ಶ್ರೀಗಂಧ ಮೈಯಳಗಮ್ಮ ।

ಉಡಿಯಲ್ಲಿ ಉಡಿಗೆಜ್ಜೆ ಬೆರಳಲಿ ಉಂಗುರ ।
ಕೊರಳಲಿ ಹಾಕಿದ ಹುಲಿಯುಗುರಮ್ಮ ।
ತಾಯಿಗೆ ಬಾಯಲಿ ಜಗವನ್ನೇ ತೋರಿದ ।
ಜಗದೋದ್ಧಾರಕ ನಮ್ಮ ಉಡುಪಿಯ ಶ್ರೀ ಕೃಷ್ಣ ॥

**ಕೊಳಲನೂದುವ ಚದುರನ್ಯಾರೆ ಪೇಳಮ್ಮಯ್ಯ ।**

ತಳಿರಂದದಿ ತಾಪೊಳೆವಕರದಿ ಪಿಡಿದು ।
ನಾದದಿ ತುಂಬಿತು ಗೋವರ್ಧನಗಿರಿ
ಯಾದವಕುಲನಭ ನೆರೆದಿತು ಖಗಕುಲ
ಸಾಧಿಸಿ ನೋಡಲು ಕೃಷ್ಣನ ಈಗಲೆ
ಸಾಧ್ಯವೇನೆ ಬೃಂದಾವನದೊಳು ।
ಮೇವು ಮರೆತವು ಗೋವುಗಳೆಲ್ಲವೂ
ಸಾವಧಾನದಿ ಹರಿದಳು ಯಮುನಾ
ಆವು ಕಾವುತಲಿ ಗೋವಳರೆಲ್ಲರು
ಹಾವಭಾವದಲಿ ಬೃಂದಾವನದೊಳು ।

ಸುರರು ಸುರಿದರಾಕಾಶದಿ ಸುಮಮಳೆ
ಸರಿದು ಪೋಗಿ ನೋಡೆ ಬೃಂದಾವನದೊಳು
ಸಾರಿ ಸಾರಿ ಶ್ರೀಕೃಷ್ಣನ ಈಗಲೆ
ತುರುಗಳ ಕಾಯ್ವ ಕದಂಬ ವನದೊಳು ।

**ಕಾಳಿಂಗನಾ ಮೆಟ್ಟಿ ನಾಟ್ಯವಾಡಿದ ಕಂಜನಾಭ ಕೃಷ್ಣನು । ಪ ।**

ಕಾಳಿಂಗನ ಮೆಟ್ಟಿ ಆಡಿದ ಭರದಲ್ಲಿ
ಶ್ರೀವತ್ಸ ಉರದಲ್ಲಿ ಕೊರಳಲ್ಲಿ ವನಮಾಲೆ
ತರಳತನದಲ್ಲಿ ಯಮುನೆಯ ಮಡುವಿನಲ್ಲಿ ಆಡುತ್ತಾ ಪಾಡುತ್ತಾ । ಅ.ಪ ।

ಕಾಲಲಿ ಗೆಜ್ಜೆ ಘುಲು ಘುಲುಕೆನ್ನೆ
ಫಾಲದಿ ತಿಲಕವು ಹೊಳೆಹೊಳೆ ಹೊಳೆಯುತ್ತ
ಜ್ವಲಿತ ಮಣಿಮಯ ಲಲಿತ ಪದಕಹಾರ
ಜ್ವಲಿತ ಕಾಂತಿ ಬೆಳಗುತ ದಿಕ್ಕುಗಳಲಿ ।೧।

ಸುರರು ದುಂದುಭಿಯ ಢಣಢಣ ಢಣರೆಂದು
ಮೊರೆಯ ತಾಳಗಲು ಝಣಝಣ ಝಣರೆಂದು
ಹರಬ್ರಹ್ಮ ಸುರರು ತಥೈ ತಥೈ ಎನಲು
ನಾರದ ತುಂಬರ ಸಿದ್ಧರು ವಿದ್ಯಾಧರರು
ಅಂಬರದಲಿ ಆದುತ್ತ ಪಾಡಲು । ೨ ।

ಯೋಗಿಗಳೆಲ್ಲ ಜಯ ಜಯ ಜಯವೆನ್ನೆ
ಭೋಗಿಗಳೆಲ್ಲ ಭಯ ಭಯ ಭಯವೆನ್ನೆ
ನಾಗಕನ್ಯೆಯರು ಅಭಯ ಅಭಯವೆನ್ನೆ
ನಾಗಶಯನ ಸಿರಿಕೃಷ್ಣ ಜನನಿಯ ಕಂಡು
ಬೇಗನೆ ಬಿಗಿದಪ್ಪಿ ಮುದ್ದನು ತೋರಿದ ।೩।

## ನಂಬಿ ಕೆಟ್ಟವರಿಲ್ಲವೋ ರಂಗಯ್ಯನ

ನಂಬಿ ಕೆಟ್ಟವರಿಲ್ಲವೋ ರಂಗಯ್ಯನ
ನಂಬದೆ ಕೆಟ್ಟರೆ ಕೆಡಲಿ ।ಪ।

ಅಂಬುಜನಾಭನ ಅಖಿಳ ಲೋಕೇಶನ
ಕಂಬುಕಂಧರ ಕೃಷ್ಣ ಕರುಣಾಸಾಗರನ ।ಅ.ಪ।

ತರುಳ ಪ್ರಹ್ಲಾದ ಸಾಕ್ಷಿ – ಸರಸಿಯೊಳಿದ್ದ
ಕರಿರಾಜನೊಬ್ಬ ಸಾಕ್ಷಿ
ಮರಣಕಾಲದಿ ಅಜಾಮಿಳ ಮಗನನು ಕರೆಯೆ

ಗರುಡನೇರಿ ಬಂದ ಗರುವರಹಿತನ ।೧।

ದೊರೆಯಲು ಏರಿಬಂದ ಪುತ್ರನನ್ನು
ಕೊರಳ್ಹಿಡಿದು ಹೊರಡಿಸಲು
ಅರಣ್ಯದೊಳಗವನಿದ್ದ ಸ್ಥಳದಲ್ಲಿ
ಭರದಿಂದೋಡಿ ಬಂದ ಭಕ್ತವತ್ಸಲನ್ನ ।೨।

ತರುಣಿ ದ್ರೌಪದಿ ಸೀರೆಯ ದುಶ್ಯಾಸನ
ಸರಸರ ಸೆಳೆಯುತಿರೆ
ಕರುಣಿ ತನ್ನೊಡತಿಯೊಡನೆ ಆದುವುದ ಬಿಟ್ಟು
ತ್ವರದಿ ಅಕ್ಷಯವಿತ್ತ ಸಿರಿಕೃಷ್ಣರಾಯನ ।೩।

## ಕಡೆಗೋಲ ತಾರೆನ್ನ ಚಿನ್ನವೆ

ಕಡೆಗೋಲ ತಾರೆನ್ನ ಚಿನ್ನವೆ – ಮೊಸ
ರೊಡೆದರೆ ಬೆಣ್ಣೆ ಬಾರದು ಮುದ್ದುರಂಗ ।ಪ।
ಅಣ್ಣನ ಒಡಗೊಂಡು ಬಾರೈಯ ಸವಿ
ಬೆಣ್ಣೆಯ ಮುದ್ದೆಯ ಮೆಲುವಿರಂತೆ
ಬಣ್ಣದ ಸರವನ್ನು ಕೊರಳಲ್ಲಿ ಹಾಕುವೆ
ಚಿಣ್ಣರೊಡನೆ ಆಡಕಳುಹುವೆ ರಂಗ ।೧।
ಪುಟ್ಟ ಬಚ್ಚಿಯ ತಂದು ನಿನ್ನಯ ಚಿನ್ನದ
ತೊಟ್ಟಿಲ ಕಾಲಿಗೆ ಕಟ್ಟಿಸುವೆ
ಬಟ್ಟಲು ತುಂಬಿದ ಸಕ್ಕರೆ ನಿನಗೀವೆ
ಕಟ್ಟಾಣಿ ಮುತ್ತಿನ ಸರವನೀವೆ ।೨।
ಬಡವರ ಭಾಗ್ಯದ ನಿಧಿಯೆ ಗೋಕುಲ
ದೊಡೆಯನೆ ಮಾಣಿಕ್ಯದ ಹರಳೆ
ಕಡುಮುದ್ದು ಉಡುಪಿನ ಬಾಲಕೃಷ್ಣಯ್ಯ
ದುಡುಕು ಮಾಡುವರೇನೊ ಪೆಂಗಳೊಳುರಂಗ ।೩।

ರಾ ಗ – ಭೀ ೦ ಪ ಲಾ ಸ್ : ತಾ ಳ – ತ್ರಿ ಪು ಟ ತಾ ಳ

ಕುಣಿದಾಡೊ ರಂಗ ನಲಿದಾಡೊ । ಪ ।
ಕುಣಿದಾಡೊ ಕುಂದಣದ ಸರಳೆ
ನಲಿದಾಡೊ ಮಾಣಿಕದ ಹರಳೆ । ಅ ಪ ।
ಪತಿಶಾಪದಿ ಶಿಲೆಯಾದ ಗೌತಮು
ಸತಿಯ ಮೆಟ್ಟಿ ಪೆಣ್ಣ ಮಾಡಿ
ಅತಿದಿವ್ಯ ಶ್ರೀಚರಣಾರವಿಂದ
ಗತಿಯಿಂದಲಿ ಧಿಂಧಿಮಿಕೆನ್ನುತ । ೧ ।
ಗಕ್ಕಸದಿ ಶಕಟಾಸುರನ
ಸೊಕ್ಕ ಮುರಿದು ಬಂಡಿಯನೊದೆದು
ಚೊಕ್ಕ ಶ್ರೀಚರಣಾರವಿಂದ
ಧಿಕ್ಕಿಟ ಧಿಮಿಕಿಟ ಝುಂಕಿಟವೆನ್ನುತ । ೨ ।
ಬಲಿಯ ಮೆಟ್ಟಿ ಕಾಳಿಂಗನ । ಹೆಡೆಯ
ತುಳಿದು ನಾಟ್ಯವನಾಡಿ
ಚೆಲುವ ಶ್ರೀಹಯವದನ ನಿಮ್ಮ
ಘಲಿಘಲಿ ಗೆಜ್ಜೆ ಘಿಲುಘಿಲುಕೆನ್ನುತ । ೩ ।

ರಾ ಗ – ಶ ೦ ಕ ರಾ ಭ ರ ಣ : ತಾ ಳ – ಏ ಕ ತಾ ಳ

ಕಂಡೆ ಕಂಡೆ ಕೃಷ್ಣ ನಿನ್ನಯ ದಿವ್ಯ ಮಂಗಳ ಮೂರ್ತಿಯ
ಕಂಡು ಬದುಕಿದೆ ಇಂದು ನಾನು ಕರುಣಿಸೊ ಎನ್ನೊಡೆಯನೆ । ಪ ।
ಉಟ್ಟ ದಟ್ಟಿಯು ಪಿಡಿದ ವಂಕಿಯು
ತೊಟ್ಟ ಕೌಸ್ತುಭ ಭೂಷಣ
ಮೆಟ್ಟಿದ ನವರತ್ನದ್ಹಾವಿಗೆ ಇಟ್ಟ ಕಸ್ತುರಿ ತಿಲಕವ । ೧ ।
ಮಂದಹಾಸವು ದಂತಪಂಜ್ತಿಯು
ಉಂದದ ಕಡೆಗಣ್ಣ ನೋಟವು

ಅಂದವಾದ ಕುರುಳುಗೂದಲು
ಮುದ್ದು ಸುರಿವೊ ಮುಖವನಾ ।೨।
ಮೊಲ್ಲೆ ಮಲ್ಲಿಗೆ ದಂಡೆ ಕೊರಳಲಿ
ಚೆಲ್ವ ಕಂಕಣ ಕೈಯಲಿ
ಗೊಲ್ಲ ಸತಿಯರ ಕುಚಗಳಲ್ಲಿ
ಅಲ್ಲೆಡೆ ಮಾಡಿ ನಗುವನ ।೩।
ಸುರರು ಪುಷ್ಪದ ವೃಷ್ಟಿ ಕರೆಯಲು
ಅಸುರರೆಲ್ಲರು ಓಡಲು
ಕ್ರೂರ ಕಾಳಿಯ ಫಣಗಳಲ್ಲಿ
ಧೀರ ಕುಣಿಕುಣಿದಾಡಿದ ।೪।
ಇನ್ನು ಎನ್ನ ಬಂಧ ತೀರಿತು
ಇನ್ನು ಕ್ಲೇಶವು ಹೋಯಿತು
ಅನ್ಯ ದೈವವ ಭಜಿಸಲ್ಯಾತಕೆ
ಮನ್ನಿಸೊ ಹಯವದನನೆ ।೫।

## ರಾಗ –ನಾದನಾಮಕ್ರಿಯ ಆದಿತಾಳ

ಗೋಪಿ ನಿನ್ನ ಮಗನಾಗಿ ಕೇರಿಯ ಬಿಟ್ಟು । ಪೋಪೆವು ಬೆಳಗಾಗಿ ।ಪ।
ಮಕ್ಕಳನಾಡಗೊಡ । ಮನೆಯ ಪೊಕ್ಕು । ಉಕ್ಕುವ ಹಾಲು ಬಿಡ ।
ಫಕ್ಕನೆ ಕೊಂಡೋಡುವ । ಬೆನ್ನಟ್ಟಲು ನಕ್ಕು ತಾ ಸೆರಗ ಬಿಡ ।೧।
ಮೊಸರನೆಲ್ಲುವ ಸುರಿವ ।ನೆಲುವಿನ ।ಹೊಸ ಬೆಣ್ಣೆಗೆ ಹಾರುವ ।
ಹಸುಳರೆಲ್ಲರಿಗೆ ಈವ । ಕೃಷ್ಣಯ್ಯ ತಾ । ಮುಸಿಕಿನೊಳಗೆ ಜಾರುವ ।೨।
ಅಂತಿಂಥವನಲ್ಲಮ್ಮ । ಈ ಮಗ ಜಗದಂತರ್ಯಾಮಿ ಕಾಣಮ್ಮ ।
ಎಂತು ತಪ್ಪಿಸಿಕೊಂಡೆವು । ನಾವು ಶ್ರೀಕಾಂತ ಪುರಂದರವಿಠಲನ ।೩॥

ಸಂಗ್ರಹ – ನರಹರಿಸುಮಧ್ವ (9916904341)
email : naraharisumadhwa@yahoo.in